ಒಮ್ಮೆಲೆ ಕೇಳಿದೆ.

ಅವರು ಯೋಚಿಸಿ, 'ಇದನ್ನು ನಾನು ಫಿಲಿಪ್‌ಗೆ ಕೇಳಬೇಕಾಗುವುದು... ಕಾಯಿಲೆಯಲ್ಲಿರುವ ತನ್ನ ಹೆಂಡತಿಯನ್ನು ನೋಡಲು ಬರುವುದು ಅವನಿಗೆ ಇಷ್ಟವಾಗುವುದೋ ಇಲ್ಲವೋ ನನಗೆ ಗೊತ್ತಿಲ್ಲ...'

ನನಗೆ ಏನು ಹೇಳುವುದೆಂದು ಅರ್ಥವಾಗದೆ, 'ಸರಿ' ಎಂದೆ.

ಲಾರಾ ಕಳೆದುಹೋದ ಧ್ವನಿಯಲ್ಲಿ ಹೇಳಿದರು, 'ಕಮಿಲಾ ತುಂಬಾ ವಿಚಿತ್ರವಾಗಿಬಿಟ್ಟಿದ್ದಾಳೆ. ಅವಳು ಎಲುಬಿನ ಗೂಡಾಗಿದ್ದಾಳೆ. ಮುಖ ಸೊಟ್ಟಗಾಗಿದೆ. ಅವಳನ್ನು ನೋಡಿದರೆ ಭಯವಾಗುತ್ತೆ...'

'ಅವಳನ್ನು ನೋಡಿದಾಗಲೂ ಭಯವಾಗುತ್ತಿತ್ತು...' ಪಾಲ್ ಬಡಬಡಿಸಿದ.

'ಯಾರನ್ನು ನೋಡಿ?'

'ನೀನಾಳನ್ನು ನೋಡಿ... ಅವಳ ಕ್ಯಾನ್ಸರ್ ಹೆಚ್ಚಾದಾಗ... ಅವಳು ಸಾಯುವ ಸ್ಥಿತಿಯಲ್ಲಿದ್ದಾಗ... ತುಂಬಾ ಕುರೂಪಿಯಾಗಿದ್ದಳು. ಒಂದು ಕಾಲದಲ್ಲಿ ಅವಳು ತುಂಬಾ ಸುಂದರಿಯಾಗಿದ್ದಳು.'

ಲಾರಾ ಸಹ ಇದೇ ಮಾತನ್ನು ಹೇಳಿದರು, 'ಕಮಿಲಾ ಒಂದು ಕಾಲದಲ್ಲಿ ಸುಂದರವಾಗಿದ್ದಳು. ಅವಳು ತುಂಬಾ ಒಳ್ಳೆಯವಳು. ನನ್ನ ಸಮವಯಸ್ಕಳು. ಅವಳಿಗೆ ಮಕ್ಕಳಾಗಲಿಲ್ಲ. ಆದರೂ ಫಿಲಿಪ್ ಮತ್ತು ಕಮಿಲಾ ಚೆನ್ನಾಗಿದ್ದರು, ಸಂತೋಷವಾಗಿದ್ದರು. ಅವರು ಒಬ್ಬರಿಗೊಬ್ಬರು ಯಥೇಷ್ಟವಾಗಿದ್ದರು. ನನಗೆ ಅವಳು ಗೆಳತಿಯಂತಿದ್ದಳು.'

'ಅವರಿಗೆ ಯಾವ ಕಾಯಿಲೆಯಿದೆ?'

'ನರ್ವಸ್ ಸಿಸ್ಟಮ್‌ನ ಡಿಸೀಸ್... ಅವಳ ಕೈಗಳು ನಡುಗುತ್ತಿದ್ದವು, ನಂತರ ಕಾಲು, ಕಡೆಗೆ ಇಡೀ ಶರೀರ ನಡುಗುತ್ತಿತ್ತು. ಅವಳ ನಡಿಗೆ, ಧ್ವನಿ ಎಲ್ಲವೂ ನಿಯಂತ್ರಣವನ್ನು ಕಳೆದುಕೊಂಡವು. ನಡೆಯುವಾಗ ಬೀಳುತ್ತಿದ್ದಳು. ನೆನಪಿನ ಶಕ್ತಿಯನ್ನು ಕಳೆದುಕೊಳ್ಳುತ್ತಿದ್ದಳು. ಇದೊಂದು ರೀತಿಯ ವಂಶ ಪರಂಪರೆಯಿಂದ ಬಂದ ಕಾಯಿಲೆ.'

'ತುಂಬಾ ವಿಚಿತ್ರ ಕಾಯಿಲೆಯಾಗಿದೆ. ಈ ಕಾಯಿಲೆಗೆ ಏನೆಂದು ಹೇಳುತ್ತಾರೆ?'

'ಸೆರೆಬ್ರಲ್ ಡಿಜನರೇಶನ್. ತುಂಬಾ ಚಿಕಿತ್ಸೆಯನ್ನು ಮಾಡಿಸಲಾಯಿತು, ಆದರೆ ಅವಳು ಗುಣವಾಗಲಿಲ್ಲ'. ಲಾರಾ ನಿಟ್ಟುಸಿರು ಬಿಟ್ಟರು.

ನನಗೆ ಲಾರಾ ತಮ್ಮದೊಂದು ಫ್ಯಾಮಿಲಿ ಆಲ್ಬಮ್ ತೋರಿಸಿದರು, ಅದರಲ್ಲಿ ಕಮಿಲಾರ ಅನೇಕ ಫೋಟೊಗಳಿದ್ದವು. ಒಬ್ಬ ಯುವ, ಸ್ವಸ್ಥ ಮತ್ತು ಆಕರ್ಷಕ ಹೆಣ್ಣು ಆ ಕಾಯಿಲೆಯಿಂದಾಗಿ ಎಷ್ಟು ದುರ್ಬಲ ಮತ್ತು ಕುರೂಪಿಯಾದಳು ಎಂದು ಮನಸ್ಸಿಗೆ ಬೇಸರವಾಯಿತು...

'ಓಹ್, ಜೀವನವೆಂದರೆ ಇಷ್ಟೆ?' ನನ್ನ ಬಾಯಿಯಿಂದ ಅನಾಯಾಸವಾಗಿ ಈ ಮಾತು ಬಂತು.

'ಹೌದು, ಇದೇ ಜೀವನ... ಹಳದಿಯಾದ ಎಲೆಗಳನ್ನು ಮರ ಸಹ ತನ್ನ ಕೊಂಬೆಯಿಂದ ಕೆಳಗೆ ಹಾಕುತ್ತದೆ.' ಲಾರಾರ ಕಣ್ಣುಗಳು ತುಂಬಿ ಬಂದವು.

ನನಗೆ ನನ್ನ ಅತ್ತೆ, ಲಾರಾರ ಬಗೆ ಸಹಾನುಭೂತಿಯುಂಟಾಯಿತು. ಪಾಪ, ಒಂಟಿಯಾಗಿ ಇದ್ದಾರೆ, ಒಂದು ನಾಯಿಯಿಂದಿಗೆ. ಬೆರಳೆಣಿಕೆಯಷ್ಟು ಸಂಬಂಧಿಕರಿದ್ದರೂ, ಅತ್ತಿಗೆಯ ಆರೋಗ್ಯ ಹದಗೆಟ್ಟಿದೆ. ಅವರ ಬೇಸರವನ್ನು ಹೊರತುಪಡಿಸಿಯೂ, ಅವರೊಂದಿಗೆ ಕೆಲವು ಸಮಯವನ್ನು ಕಳೆಯಲು ಅವರ ಬಳಿಗೆ ಹೋಗಲಾರಂಭಿಸಿದೆ.

ಮೂರನೆಯ ಭೇಟಿಯಲ್ಲಿ ಅವರು ನನಗೆ ಸ್ಪಷ್ಟವಾಗಿ, ನೀನು ಇಷ್ಟು ಬೇಗ ಪದೇ ಪದೇ ಬರುವುದು ಬೇಡ. ನೀನಿನ್ನೂ ಯುವತಿ. ನಿನ್ನ ಗಮನ ಮತ್ತು ಸಮಯವನ್ನು ಬೇರೆಡೆಗೆ ತೊಡಗಿಸು, ಈ ದೇಶದ ಭಾಷೆಯನ್ನು ಕಲಿ, ನೌಕರಿಗೆ ಪ್ರಯತ್ನಿಸು. ಸಂಪಾದನೆ ಮಾಡಿ ಉಣ್ಣಬೇಕು ಎಂದರು. ಅವರು ಇದನ್ನೆಲ್ಲಾ ನನ್ನ ಒಳಿತಿಗಾಗಿ ಹೇಳುತ್ತಿದ್ದರು, ಆದರೆ ನನಗೆ ವಿಚಿತ್ರವಾಗಿ ಕಂಡಿತು. ಅವಮಾನ ಎಂದೂ ಅನ್ನಿಸಿತು. ಭಾರತ ಮತ್ತು ಆಫ್ರಿಕಾದಲ್ಲಿ ಹಿರಿಯರು–ವೃದ್ಧರು ಪರಿವಾರದಲ್ಲಿರಲು ಬಯಸುತ್ತಾರೆ; ಯುವಕರು ಮತ್ತು ಮಕ್ಕಳು ಬಂದು ತಮ್ಮನ್ನು ಭೇಟಿಯಾಗಲಿ, ಆ ಮೂಲಕ ತಮ್ಮ ಸಮಯ ಕಳೆಯಲಿ ಎಂದು ಬಯಸುತ್ತಾರೆ. ಮೋಮ್ಬಾಸಾದಲ್ಲಿ ಅಬ್ರಾಹಮ್‌ನ ಮಾವ–ಅತ್ತೆಯ ಮನೆಗೆ ನಾವು ಹೋಗಲು ಸಾಧ್ಯವಾಗದಿದ್ದಾಗ ಅವರು, ನೀವು ನಮ್ಮನ್ನು ಮರೆತಿದ್ದೀರ ಎಂದು ರೇಗುತ್ತಿದ್ದರು. ಅನೇಕ ದಿನಗಳವರೆಗೆ ಮೌರೀನರನ್ನು ಮಾತನಾಡಿಸದಿದ್ದಾಗ, ಅವರೂ ಸಹ ದೂರುತ್ತಿದ್ದರು. ಆದರೆ ಇಲ್ಲಿ ಎಲ್ಲರಿಗೂ ಖಾಸಗಿತನ ಬೇಕು. ಇಲ್ಲಿಯ ಸಮಾಜ ಅದೆಷ್ಟು ಭಿನ್ನ... ಸಂಸ್ಕೃತಿ ಅದೆಷ್ಟು ಭಿನ್ನ! ಚಳಿಯ ಹವಾಮಾನದಂತೆ ಚಳಿ ಜನ... ಎಲ್ಲೂ ಬಿಸಿ, ಕಾವು ಕಾಣ ಬರುವುದಿಲ್ಲ.

ಅದೊಂದು ದಿನ ಲಾರಾ ನನಗೆ ಫೋನ್ ಮಾಡಿ ಹೇಳಿದರು, 'ಫಿಲಿಪ್‌ನನ್ನು ಕೇಳಿದ್ದೇನೆ... ನೀನು ಕಮಿಲಾಳನ್ನು ಭೇಟಿಯಾಗಲು ಅವರ ಮನೆಗೆ ಹೋಗಬಹುದು. ಅವರಿಗೆ ಅಡ್ಡಿಯಿಲ್ಲ.'

ಇದರಲ್ಲಿ ಅಡ್ಡಿಯ ಪ್ರಶ್ನೆ ಏನು? ರೋಗಿಗಳ ಕ್ಷೇಮ ಸಮಾಚಾರವನ್ನು ಕೇಳುವುದು ಮನೆಯವರ ಕರ್ತವ್ಯ ಎಂದು ಹೇಳಲು ಮನಸ್ಸಾಯಿತು. ಆದರೆ ಮೌನವಹಿಸಿದೆ.

ಫಿಲಿಪ್ ಲಾರಾಗಿಂತ ಎರಡು ವರ್ಷ ದೊಡ್ಡವರಾಗಿದ್ದರು; ಅವರು ಕೋಪನ್‌ಹೇಗನ್‌ನ ಒಂದು ಉಪನಗರದಲ್ಲಿ ವಾಸಿಸುತ್ತಿದ್ದರು. ನಾನು ಲಾರಾರೊಂದಿಗೆ ಅವರ ಮನೆಗೆ ಹೋದೆ. ಕಮಿಲಾ ಸೊರಗಿದ ಸ್ಥಿತಿಯಲ್ಲಿ ಹಾಸಿಗೆಯಲ್ಲಿ ಮಲಗಿದ್ದರು. ಅದೊಂದು ಚಿಕ್ಕ ಫ್ಲಾಟ್. ಮನೆ ಅಸ್ತವ್ಯಸ್ತವಾಗಿತ್ತು. ಕಮಿಲಾರ ಹಾಸಿಗೆಯನ್ನು ಲಿವಿಂಗ್ ರೂಮಿನಲ್ಲಿಯೇ ಹಾಕಲಾಗಿತ್ತು; ಹಾಸಿಗೆಯ ಬಳಿಯಿದ್ದ ಒಂದು ಮೇಜಿನ ಮೇಲೆ ಔಷಧಿಗಳು ಅತ್ತಇತ್ತ ಇದ್ದವು. ಅಲ್ಲಿಯೇ ನೀರಿನ ಜಗ್, ಲೋಟಗಳು... ವಾತಾವರಣ ಉಸಿರುಗಟ್ಟಿಸುವಂತಿತ್ತು. ಫಿಲಿಪ್, ಹೆಂಡತಿಯ ಹಾಸಿಗೆಯ ಪಕ್ಕದಲ್ಲಿದ್ದ ಸೋಫಾದಲ್ಲಿ ಮಲಗುತ್ತಿದ್ದರು. ಫಿಲಿಪ್ ತುಂಬಾ ನಿಷ್ಠೆಯಿಂದ ಹೆಂಡತಿಯ ಸೇವೆಯನ್ನು ಮಾಡುತ್ತಿದ್ದರು, ಇದು ನನ್ನ ಹೃದಯವನ್ನು ಸ್ಪರ್ಶಿಸಿತು. ಅವರು ನನಗೆ, ತಮ್ಮ ಹೆಂಡತಿಯನ್ನು ನೋಡಲು ಬಂದಿದ್ದಕ್ಕೆ ಧನ್ಯವಾದವನ್ನು ಹೇಳಿದರು. ನನ್ನನ್ನು ಪರಿಚಯಿಸುತ್ತಾ ತಮ್ಮ ಹೆಂಡತಿಗೆ, 'ಇವಳು ನ್ಯಾನ್ಸಿ, ಲಾರ್ಸ್‌ನ ಹೆಂಡತಿ...' ಎಂದರು.

ಕಮಿಲಾಗೆ ಅದೇನು ಮತ್ತು ಅದೆಷ್ಟು ಅರ್ಥವಾಯಿತೋ ತಿಳಿಯಲಿಲ್ಲ. ನಾನು ಅವರಿಗಾಗಿ ಮಿಕ್ಸ್ ವೆಜಿಟಬಲ್ ಸೂಪ್ ಮಾಡಿಕೊಂಡು ಹೋಗಿದ್ದೆ, ಇದಕ್ಕಾಗಿ ಫಿಲಿಪ್ ನನಗೆ ವಿಶೇಷವಾದ ಕೃತಜ್ಞತೆಯನ್ನು ಹೇಳಿದರು. ಅವರು ನನ್ನೆದುರೇ ಕಮಿಲಾರನ್ನು ಕೂರಿಸಿ, ತಮ್ಮ ಕೈಯಾರೆ ಸೂಪ್ ಕುಡಿಸಲು ಪ್ರಯತ್ನಿಸಿದರು. ಸೂಪ್ ತುಂಬಿದ ಚಮಚವನ್ನು ಅವರ ಬಾಯಿಯೊಳಗೆ ತುರುಕಿದರು, ಆದರೆ ಅದನ್ನು ಗುಟುಕರಿಸಲು ಅವರಿಗೆ ಸಾಧ್ಯವಾಗಲಿಲ್ಲ. ಎಲ್ಲವೂ ಬಾಯಿಯಿಂದ ಹೊರಗೆ ಬಂತು. ಫಿಲಿಪ್ ಟವಲಿನಿಂದ ಹೆಂಡತಿಯ ಬಾಯಿಯನ್ನು ಒರೆಸಿದರು. ಅವರ ಪರಿಸ್ಥಿತಿಯನ್ನು ನೋಡಿ ನನ್ನ ಮನಸ್ಸಿನಲ್ಲಿ ಅಪಾರ ಕರುಣೆ ಹುಟ್ಟಿತು.

ನಾನು ಅವರನ್ನು ಭೇಟಿಯಾಗಿ ಬಂದ ಮರುದಿನವೇ ಕಮಿಲಾ ಕೊನೆ ಉಸಿರೆಳೆದರು. ವಿಧಿಯ ಆಟ... ಅವರು ಸತ್ತಾಗ ಅದೇ ಫ್ಯುನರಲ್ ಹೋಮ್‌ಗೆ ಅಂದರೆ ಎಸ್.ಎಸ್. ಫ್ಯುನರಲ್ ಸರ್ವೀಸ್‌ಗೆ ಫೋನ್ ಮಾಡಲಾಯಿತು... ಅವನೇ, ಕ್ರಿಮೇಶನ್ ಮತ್ತು ಹೂವುಗಳಿಗೆ ವ್ಯವಸ್ಥೆಯನ್ನು ಮಾಡಿದ... ಅವನ ರೇಟ್ ಸಹ ಹೆಚ್ಚಿರಲಿಲ್ಲ.

ನಾನೂ ಸಹ ಲಾರ್ಸ್‌ನೊಂದಿಗೆ ಕಮಿಲಾರ ಫ್ಯುನರಲ್‌ನಲ್ಲಿ ಭಾಗಿಯಾದೆ. ಇಲ್ಲಿ ವಿವಾಹಕ್ಕಿಂತ ಅಂತಿಮ ಸಂಸ್ಕಾರಕ್ಕೆ ಹೆಚ್ಚು ಮಹತ್ವವನ್ನು ಕೊಡಲಾಗುತ್ತದೆ ಎಂದು ನನಗೆ ಅನ್ನಿಸಿತು. ಏಕೆಂದರೆ ಲಾರ್ಸ್ ಮತ್ತು ನನ್ನ ವಿವಾಹದಲ್ಲಿ, ಕಮಿಲಾರ ಫ್ಯುನರಲ್‌ಗಿಂತ ಕಡಿಮೆ ಸಂಖ್ಯೆಯಲ್ಲಿ ಜನ ಕಲೆತಿದ್ದರು. ಲಾರಾರ ತಾಯಿ ಯೂಲ್ಯಾಂಡಿನಿಂದ ಬಂದಿದ್ದರು. ಲಾರಾ–ಫಿಲಿಪ್‌ನ ಅಂಕಲ್–ಆಂಟಿ ಮತ್ತು ಕಸಿನ್ಸ್ ಸಹ ಬಂದಿದ್ದರು. ಕಮಿಲಾರ ಪರಿವಾರದವರು ಸಹ ಹೆಚ್ಚು ಸಂಖ್ಯೆಯಲ್ಲಿ ಆಗಮಿಸಿದ್ದರು. ಫಿಲಿಪ್ ಮತ್ತು ಕಮಿಲಾರ ನೆರೆಹೊರೆಯವರು ಮತ್ತು ಮಿತ್ರರು ಸಹ ಉಪಸ್ಥಿತರಿದ್ದರು. ಎಲ್ಲರೂ ಕಪ್ಪು ವಸ್ತ್ರವನ್ನು ಧರಿಸಿದ್ದರು; ಇದು ದುಃಖದ ವಾತಾವರಣವನ್ನು ಇನ್ನಷ್ಟು ಭಾರಗೊಳಿಸುತ್ತಿತ್ತು. ನನ್ನ ವಿವಾಹವಾದ ತಕ್ಷಣವೇ ನಾನು ಮಾವನ ಮನೆಯ ಶೋಕ ಸಭೆಯಲ್ಲಿ ಭಾಗವಹಿಸಬೇಕಾಯಿತು; ಇದು ನನಗೆ ಕಮಿಲಾ ಸ್ವರ್ಗಸ್ಥರಾಗಿದ್ದಕ್ಕಿಂತ ಹೆಚ್ಚು ವಿಷಾದದ ಸಂಗತಿಯಾಗಿತ್ತು.

ಸರಿ, ಹೋಗುವವರು ಹೋಗುತ್ತಾರೆ, ಉಳಿದವರು ತಮ್ಮ ಜೀವನವನ್ನು ಸಾಗಿಸುತ್ತಾರೆ. ಕಮಿಲಾರ ಸಾವಿನ ನಂತರ ಶೀಘ್ರವೇ ಪರಿವಾರದ ಸದಸ್ಯರು ದುಃಖದಿಂದ ಹೊರ ಬಂದರು. ಲಾರಾ ಸಹ ಸಹಜಾವಸ್ಥೆಗೆ ಬಂದರು.

(ಸಶೇಷ)